ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ
ಸಮಗ್ರ ಶಿಕ್ಷಣ ಕರ್ನಾಟಕ ಹಾವೇರಿ.
ಜಿಲ್ಲಾ ಆಡಳಿತ ಭವನ 3ನೇ ಮಹಡಿ ದೇವಗಿರಿ ಹಾವೇರಿ
ಫೋನ್ ನಂಬರ 08375-249064 ಇ-ಮೇಲ್ rmsahaveri@gmail.com

ದಿ: 8/9/2020

## ಜಿಲ್ಲಾ ಅನುಷ್ಠಾನ ಮತ್ತು ಮೇಲುಸ್ತುವಾರಿ ಸಮಿತಿಯ (ಡಿ.ಐ.ಎಂ.ಸಿ) ಸಭಾ ನಡಾವಳಿ 2020-21

ದಿನಾಂಕ: 8/9/2020 ರಂದು ಬೆಳಿಗ್ಗೆ 11.30 ಕ್ಕೆ ಜಿಲ್ಲಾಧಿಕಾರಿಗಳ ಕಛೇರಿ, ಹಾವೇರಿ ಇಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಪ್ರೌಢಶಾಲೆಗಳಲ್ಲಿ ಹಾಗೂ ಪ್ರಾಥಮಿಕ ಶಾಲೆಗಳಲ್ಲಿ 2020-21 ನೇ ಸಾಲಿನ ಇಕೋ-ಕ್ಲಬ್‌ಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಚರ್ಚಿಸಲು ಜಿಲ್ಲಾ ಅನುಷ್ಠಾನ ಮತ್ತು ಮೇಲುಸ್ತುವಾರಿ ಸಮಿತಿ (ಡಿ.ಐ.ಎಂ.ಸಿ)ಯ ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀಯುತ ಎಸ್. ಬಿ. ಶೆಟ್ಟೆಣ್ಣವರ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದು ಸಭೆಗೆ ಹಾಜರಾದವರ ವಿವರ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಹುದ್ದೆ |
|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು, ಹಾವೇರಿ |
| 2 | ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾವೇರಿ |
| 3 | ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಹಾವೇರಿ |
| 4 | ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಹಾವೇರಿ |
| 5 | ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾವೇರಿ |
| 6 | ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ ಹಾವೇರಿ (ಪರವಾಗಿ) |
| 7 | ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು-1 ಸಮಗ್ರ ಶಿಕ್ಷಣ ಕರ್ನಾಟಕ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾವೇರಿ |
| 8 | ಜಿಲ್ಲಾ ಉಪಯೋಜನಾ ಸಮನ್ವಯಾಧಿಕಾರಿಗಳು-2 ಸಮಗ್ರ ಶಿಕ್ಷಣ ಕರ್ನಾಟಕ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾವೇರಿ |
| 9 | ಸಹಾಯಕ ಸಮನ್ವಯಾಧಿಕಾರಿಗಳು-1 ಸಮಗ್ರ ಶಿಕ್ಷಣ ಕರ್ನಾಟಕ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾವೇರಿ |
| 10 | ಮು.ಶಿ ಸರ್ಕಾರಿ ಪ್ರೌಢ ಶಾಲೆ ಇಚ್ಛಂಗಿ ತಾ-ಸವಣೂರು |
| 11 | ಮು.ಶಿ ಸರ್ಕಾರಿ ಪ್ರೌಢ ಶಾಲೆ ಹಾವೇರಿ |
| 12 | ಮು.ಶಿ ಶ್ರೀ ಬೀರೇಶ್ವರ ಪ್ರೌಢ ಶಾಲೆ ಕಾಕೋಳ ತಾ- ರಾಣೇಬೆನ್ನೂರು |
| 13 | ಮು.ಶಿ ಎನ್. ಸಿ. ಜೆ. ಸಿ ಪ್ರೌಢ ಶಾಲೆ ಹಾನಗಲ್ |

ಪ್ರಥಮವಾಗಿ ಮಾನ್ಯ ಜಿಲ್ಲಾಧಿಕಾರಿಗಳನ್ನು ಹಾಗೂ ಈ ಸಭೆಯ ಅಧ್ಯಕ್ಷರನ್ನು, ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿ.ಪಂ. ಹಾವೇರಿ ಅವರನ್ನು, ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಹಾವೇರಿ ಅವರನ್ನು ಹಾಗೂ ಇತರೆ ಸದಸ್ಯರನ್ನು ಶ್ರೀಮತಿ ಕೆ. ಎಂ. ಸುನೀತ ಇವರು ಸ್ವಾಗತಿಸಿದರು. ಬಳಿಕ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಪ್ರಾಸ್ತಾವಿಕವಾಗಿ ಮಾತನಾಡಿ ಜಿಲ್ಲೆಯಲ್ಲಿ ಇಕೋ-ಕ್ಲಬ್ ಚಟುವಟಿಕೆಯಡಿ ಆಯ್ಕೆ ಮಾಡಿಕೊಂಡ 250 ಪ್ರಾಥಮಿಕ ಶಾಲೆಗಳಲ್ಲಿ ಹಾಗೂ 250 ಪ್ರೌಢ ಶಾಲೆಗಳಲ್ಲಿ ಇಕೋ-ಕ್ಲಬ್‌ಗಳ ಅಡಿ ಈವರೆಗೂ ಹಮ್ಮಿಕೊಂಡಿರುವ (ಹಿಂದಿನ ಸಾಲುಗಳಲ್ಲಿ) ಚಟುವಟಿಕೆಗಳ ಬಗ್ಗೆ ತಿಳಿಸಿದರು. ಜಿಲ್ಲೆಯಲ್ಲಿ 137 ಸರಕಾರಿ ಪ್ರೌಢಶಾಲೆಗಳನ್ನು ಹಾಗೂ 113 ಅನುದಾನಿತ



Scanned by CamScanner

ಪ್ರೌಢಶಾಲೆಗಳನ್ನು ಮೊದಲ ಹಂತದಲ್ಲಿ ಆಯ್ಕೆ ಮಾಡಿಕೊಂಡಿದ್ದು, 2019-20 ನೇ ಸಾಲಿನಿಂದ 250 ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಕೂಡಾ ಇಕೋ-ಕ್ಲಬ್ ಚಟುವಟಿಕೆಯಡಿ ಸೇರಿಸಿ ಪ್ರತಿ ಶಾಲೆಗೆ ಕಳೆದ ವರ್ಷದಿಂದ ತಲಾ ರೂ. 5000/- ಗಳನ್ನು ಎಂಪ್ರಿ ಸಂಸ್ಥೆ(Environmental Management and Policy Research Institute) ಬೆಂಗಳೂರು ಬಿಡುಗಡೆ ಮಾಡುವುದಾಗಿ ತಿಳಿಸಿದರು. ಈ ಅನುದಾನದಲ್ಲಿ ಪರಿಸರದ ಬಗ್ಗೆ ವಿದ್ಯಾರ್ಥಿಗಳಲ್ಲಿ ಒಲವು, ಅರಿವು ಹಾಗೂ ಸೇವಾ ಮನೋಭಾವ ಬೆಳೆಸುವಂತಹ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಮಾತನಾಡಿ ವಿದ್ಯಾರ್ಥಿಗಳಲ್ಲಿ ಪ್ರಕೃತಿಯ ಬಗ್ಗೆ ಪ್ರೀತಿಯನ್ನು ಮೂಡಿಸಬೇಕಾದರೆ ಅವರನ್ನು ಹತ್ತಿರದ ಕಾಡು ಪ್ರದೇಶಗಳಿಗೆ ಹಾಗೂ ಜಲ ಪ್ರದೇಶಗಳಿಗೆ ಕರೆದೊಯ್ಯಬೇಕು ಎಂದು ತಿಳಿಸಿದರು. ಅದಕ್ಕೆ ಉಪಯೋಜನಾ ಸಮನ್ವಯಾಧಿಕಾರಿಗಳು ಉತ್ತರಿಸಿ ವಿಶ್ವ ಸಾಗರ ದಿನವಾದ ಜೂನ್-8 ರಂದು ಶಾಲೆಗಳಿಂದ ಇಕೋ-ಕ್ಲಬ್ ಅಡಿ ಸದಸ್ಯ ವಿದ್ಯಾರ್ಥಿಗಳನ್ನು ಹತ್ತಿರದ ನದಿ/ಕೆರೆಗಳಿಗೆ ಕರೆದೊಯ್ದು ಜಲವಾಸಿ ಪ್ರಾಣಿಗಳ ಹಾಗೂ ಜಲ ಸಸ್ಯಗಳ ಬಗ್ಗೆ ಮಕ್ಕಳಿಗೆ ಪರಿಚಯ ಮಾಡಿಸುವ ಕಾರ್ಯಕ್ರಮ ನಡೆಸುತ್ತಿರುವುದಾಗಿ ತಿಳಿಸಿದರು.

ನಂತರ ಮಾನ್ಯ ಜಿಲ್ಲಾಧಿಕಾರಿಗಳು ಇಕೋ-ಕ್ಲಬ್ ಅಡಿಯಲ್ಲಿ ಅರಣ್ಯ ಇಲಾಖೆಯೊಂದಿಗೆ ಕೈಜೋಡಿಸಿ ಗುಡ್ಡ ಪ್ರದೇಶಗಳನ್ನು ಭೇಟಿ ಮಾಡಿಸಬೇಕು ಮಕ್ಕಳನ್ನು ಆ ಪ್ರದೇಶಗಳಿಗೆ ಹಕ್ಕಿಗಳು ಬರುವ ಸಮಯಕ್ಕೆ/ ಕಾಲದಲ್ಲಿ ಕರೆದೊಯ್ಯಬೇಕು. ಅರಣ್ಯ ಇಲಾಖೆಯೊಂದಿಗೆ ಕೂಡಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರಿಂದ ಹೆಚ್ಚಿನ ಅನುದಾನವು ಈ ಚಟುವಟಿಕೆಗಳಿಗಾಗಿ ದೊರೆಯುವುದು ಎಂದು ತಿಳಿಸಿದರು. ಮುಂದುವರೆದು ಮಾನ್ಯ ಜಿಲ್ಲಾಧಿಕಾರಿಗಳು ಶಾಲೆಗಳಲ್ಲಿ ಪರಿಸರ ಕುರಿತಾದ slide ಪ್ರದರ್ಶನ ಮಾಡುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಜ್ಞಾನ ಮತ್ತು ಉತ್ತಮ ಧೋರಣೆಯನ್ನು ಬೆಳೆಸಲು ಸಾಧ್ಯವೆಂದು ಹೇಳಿದರು. ರಾಸಾಯನಿಕ ಗೊಬ್ಬರಗಳಿಗಿಂತ ಸಾವಯವ ಗೊಬ್ಬರಗಳನ್ನು ತಯಾರಿಸಿ ಬಳಸುವ ಬಗ್ಗೆ ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಬೆಳೆಸಬೇಕು ಎಂದು ತಿಳಿಸಿದರು. ಆರ್.ಎಫ್.ಓ ಕಛೇರಿಯ ಸಹಕಾರದೊಂದಿಗೆ ಗಿಡ-ಮರಗಳನ್ನು ಗುರುತಿಸುವ ಹಾಗೂ ಹೆಸರಿಸುವ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸುವ ಔಚಿತ್ಯದ ಬಗ್ಗೆ ತಿಳಿಸಿದರು. ಟಿ.ವಿ ಗಳು ಲಭ್ಯವಿರುವ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ National Geographic Channel ನಲ್ಲಿ ಜೀವ ವೈವಿಧ್ಯತೆಯ ಬಗ್ಗೆ ಪ್ರಸಾರವಾಗುವ ಕಾರ್ಯಕ್ರಮಗಳನ್ನು ವೀಕ್ಷಿಸಲು ಅನುವು ಮಾಡಿಕೊಡಬೇಕಾಗಿ ಸೂಚಿಸಿದರು. ವಿದ್ಯಾರ್ಥಿಗಳಿಗೆ ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸುವುದಲ್ಲದೇ ಮರುಬಳಕೆಗೆ ಉಪಯೋಗವಾಗುವ ಹಾಗೂ ಉಪಯೋಗವಾಗದ ಪ್ಲಾಸ್ಟಿಕ್‌ಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ನುಡಿದರು. ಇದಕ್ಕೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕೂಡಾ ಧ್ವನಿಗೂಡಿಸಿದರು. ಇದರಿಂದ 10ನೇ ತರಗತಿ ಪಾಸಾದ ನಂತರ ವಿದ್ಯಾರ್ಥಿಗಳು ವಿವಿಧ ಸಮಾಜಘಾತುಕ ಸಂಘಟನೆಗಳಿಗೆ ಸೇರದೇ ಉಪಯುಕ್ತ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಾಧ್ಯವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಉಪಯೋಜನಾ ಸಮನ್ವಯಾಧಿಕಾರಿಗಳು ಇವರು ಈಗಾಗಲೇ ಹಾವೇರಿಯ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶಕ್ಕಾಗಿ ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಧ್ವನಿವರ್ಧಕದ ಮೂಲಕ ಪ್ರಚಾರ ಮಾಡಿಸುತ್ತಿರುವುದಾಗಿ ತಿಳಿಸಿದರು.

ಈ ಸಮಯದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮಾತನಾಡಿ 45 ನಿಮಿಷಗಳ ಕಾಲ ಪರಿಸರ/ಕಾಡು/ಕಾಡು ಮೃಗಗಳು ಇವುಗಳಿಗೆ ಸಂಬಂಧಿಸಿದ ಮಾಹಿತಿ ನೀಡುವಂತಹ ಸಿ.ಡಿ ಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದು ಶಾಲೆಗಳಲ್ಲಿ ಇವುಗಳನ್ನು ಬಳಸಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬಹುದೆಂದು ತಿಳಿಸಿದರು. ತಮ್ಮ ಇಲಾಖೆಯಿಂದ ಪ್ರತಿ ವರ್ಷ "ಚಿಣ್ಣರ ವನ ದರ್ಶನ" ಕಾರ್ಯಕ್ರಮದಡಿ ಒಂದು ತಾಲೂಕಿನಿಂದ 250 ರಿಂದ 300 ವಿದ್ಯಾರ್ಥಿಗಳನ್ನು ಶಿವಮೊಗ್ಗ ಜಿಲ್ಲೆಯ ತಾವರೆಕೊಪ್ಪದ " ಲಯನ್ಸ್ ಸಫಾರಿ" ಹಾಗೂ ಸಕ್ರೆ ಬೈಲಿನ "ಎಲಿಫೆಂಟ್ ಸಫಾರಿ" ಗೆ ಕರೆದುಕೊಂಡು ಹೋಗುವ ಚಟುವಟಿಕೆ ಹಮ್ಮಿಕೊಂಡಿದ್ದು ಈ ವರ್ಷ ಶಾಲೆ ಆರಂಭವಾದ ನಂತರ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ಸಂಪರ್ಕಿಸಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.



Scanned by CamScanner

ಆನಂತರ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ ಸ್ವಚ್ಛ ಭಾರತ ಮಿಷನ್ ಕಾರ್ಯಕ್ರಮದಡಿ ಲಭ್ಯವಿರುವ consultants (ಸಲಹೆಗಾರರು) ಗಳನ್ನು ಬಿ.ಆರ್.ಸಿ ಗಳು ಭೇಟಿ ಮಾಡಿ ಗ್ರಾಮಗಳಲ್ಲಿ ಹಾಗೂ ಶಾಲೆಗಳಲ್ಲಿ ಘನ ತಾಜ್ಯ ವಿಲೇವಾರಿ, ಒಣ ಕಸ–ಹಸಿ ಕಸಗಳ ವಿಂಗಡಣೆ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡುವುದು ಇಂತಹುದೇ ಅರ್ಥವತ್ತಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ಗ್ರಾಮಗಳಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಬಹುದು ಎಂದು ಸಲಹೆ ನೀಡಿದರು. ಈ ಬಗ್ಗೆ ಶಿಕ್ಷಕರ ಹಾಗೂ ಮಕ್ಕಳ ಕಾರ್ಯಗಾರ ಹಮ್ಮಿಕೊಳ್ಳುವುದು ಸೂಕ್ತವೆಂದು ತಿಳಿಸಿದರು. ಶಾಲೆಗಳಲ್ಲಿ ಸ್ಥಾಪನೆಗೊಂಡಿರುವ ಸ್ಕೌಟ್ಸ್ & ಗೈಡ್ಸ್ ಘಟಕಗಳ ಮೂಲಕ ಎಲ್ಲಾ ಶಾಲೆಗಳಲ್ಲೂ ಸಸಿಗಳನ್ನು ನೆಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಿದರು. ಇದಕ್ಕೆ ಮಾನ್ಯ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದಾಗಿ ಅಧಿಕಾರಿಗಳಿಗೆ ತಿಳಿಸಿದರು. ಮಕ್ಕಳಿಂದ ಗ್ರಾಮಗಳನ್ನೇ ಪರಿವರ್ತಿಸಬಹುದು ಹಾಗೂ ಈ ನಿಟ್ಟಿನಲ್ಲಿ ಪ್ರಚಾರಕ್ಕಿಂತ ಹೆಚ್ಚಾಗಿ ಸ್ವಯಂ ಪ್ರೇರಣೆಯ ಮೂಲಕವೇ ಗ್ರಾಮಸ್ಥರು ಇಂತಹ ಕಾರ್ಯಗಳಲ್ಲಿ ತೊಡಗುವಂತೆ ಉತ್ತೇಜಿಸಬೇಕು ಎಂದು ತಿಳಿಸಿದರು. ವಿದ್ಯಾರ್ಥಿಗಳಲ್ಲಿ ಮಾನಸಿಕ ಪರಿವರ್ತನೆ ಉಂಟು ಮಾಡಬೇಕಾದದ್ದು ಇಕೋ–ಕ್ಲಬ್‌ಗಳ ಪ್ರಮುಖ ಉದ್ದೇಶವಾಗಬೇಕೆಂದು ಹಾಗೂ ಶಾಲೆಗಳಲ್ಲಿ ಪಾಠ ಮಾಡುವ ಮೊದಲು ಇಂತಹ ವಿಷಯಗಳಲ್ಲಿ ಅರಿವು ಮೂಡಿಸಬೇಕು ಎಂದು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಮಾತನಾಡಿ ಈ ವರ್ಷ ಶಾಲೆಗಳು ಆರಂಭವಾದ ನಂತರ ಈವರಗೂ ಚರ್ಚಿಸಲ್ಪಟ್ಟ ಹಾಗೂ ಇಬ್ಬರೂ ಅಧಿಕಾರಿಗಳು ಸೂಚಿಸಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿ ಸಭೆಗೆ ತಿಳಿಸಿದರು. ಅಂತಿಮವಾಗಿ ಸಭೆಯಲ್ಲಿ ಭಾಗವಹಿಸಿ ಅಮೂಲ್ಯವಾದ ಸಲಹೆಗಳನ್ನು ನೀಡಿದ ಸಭಾಧ್ಯಕ್ಷರಿಗೂ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೂ ಮತ್ತು ಸರ್ವ ಸದಸ್ಯರಿಗೂ ವಂದನಾರ್ಪಣೆಗಳನ್ನು ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಹಾವೇರಿ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್ ಹಾವೇರಿ

ಜಿಲ್ಲಾಧಿಕಾರಿಗಳು
ಹಾವೇರಿ ಜಿಲ್ಲೆ

Scanned by CamScanner